**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಂ.ಎಫ್.ಸಿ ನ್ಯಾಯಾಲಯ,**
**ಕೆ. ಆರ್. ಪೇಟೆ.**

| ಸಿಸಿ:ನಂಬರ್ 69/2018 | ಸಿಡಬ್ಲ್ಯೂ-1 | ಪಿ.ಡಬ್ಲ್ಯೂ-1 |
|---|---|---|

ಸಾಕ್ಷಿದಾರರ ಹೆಸರು : ಸುರೇಶ

ತಂದೆಯ ಹೆಸರು : ಬೋರೇಗೌಡ

ವಯಸ್ಸು : 55 ವರ್ಷ

ಉದ್ಯೋಗ : ವ್ಯವಸಾಯ

ವಾಸ ಸ್ಥಳ : ಪಿಡಿಜಿ ಕೊಪ್ಪಲು ಗ್ರಾಮ, ಕೆ.ಆರ್.ಪೇಟೆ ತಾಲ್ಲೂಕು.

ದಿನಾಂಕಃ 04.04.2022 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದೆ.

**ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ ರವರಿಂದ**

ನನಗೆ ಆರೋಪಿತರ ಪರಿಚಯವಿದೆ. ನ್ಯಾಯಾಲಯದ ಮುಂದಿರುವ ಆರೋಪಿತರು ನಮ್ಮ ಊರಿನವರು. ಅವರಲ್ಲಿ ಇಬ್ಬರು ಬೇರೆ ಊರಿನವರು. ಚಾಸಾ 2 ಕಿರಣ್ ನನ್ನ ಮಗ. ಚಾಸಾ 3 ಸರೋಜ ನನ್ನ ಹೆಂಡತಿ. ಸುಮಾರು 4 ವರ್ಷಗಳ ಹಿಂದೆ ಕೂಡಲಕುಪ್ಪೆ ಗ್ರಾಮದ ಸರ್ವೆ ನಂ. 77/7 ಮತ್ತು 77/8 ರಲ್ಲಿ ನಾನು ಕೆಲಸ ಮಾಡುತ್ತಿದ್ದೆನು. ನನ್ನೊಂದಿಗೆ ನನ್ನ ಹೆಂಡತಿ ಮತ್ತು ಮಗ ಇದ್ದರು. ಸುಮಾರು 9.00 ಗಂಟೆಗೆ ಆರೋಪಿತರಾದ ಅಶೋಕ, ಪ್ರಭಾವತಿ, ಲಕ್ಕಪ್ಪ, ಪ್ರಭ, ದ್ಯಾವೇಗೌಡ, ಜ್ಯೋತಿ, ದ್ಯಾವೇಗೌಡರ ಹೆಂಡತಿ ದೇವಮ್ಮರವರು ಏಕಾಏಕಿ ನನ್ನ ಜಮೀನಿಗೆ ಬಂದು ಹಲ್ಲೆ ಮಾಡಿದರು. 1 ನೇ ಆರೋಪಿ ಅಶೋಕ ನನ್ನ ಎದೆಯ ಮೇಲೆ ಕೈಯಿಂದ ಹಲ್ಲೆ ಮಾಡಿದನು. ಚಾಸಾ 2 ಕಿರಣ್ ರವರಿಗೂ ಕೂಡ ಆತನೇ ಮಚ್ಚಿನಿಂದ ಹಲ್ಲೆ ಮಾಡಿದನು. ನಂತರ ಲಕ್ಕಪ್ಪರವರು ದೊಣ್ಣೆಯಿಂದ ಕಿರಣ್ ರವರ ಸೊಂಟದ ಮೇಲೆ ಮತ್ತು ಬೆನ್ನಿನ ಮೇಲೆ ಹಲ್ಲೆ ಮಾಡಿದರು. ನನ್ನ ಹೆಂಡತಿಗೆ ಆರೋಪಿತರಾದ ಪ್ರಭಾವತಿ, ಅಶೋಕ, ದೇವಮ್ಮರವರು ಹಲ್ಲೆ ಮಾಡಿದರು. ಅಶೋಕ ನನ್ನ ಹೆಂಡತಿಯ ಸೀರೆ ಹಿಡಿದು ಎಳೆದಾಡಿದನು. ಆರೋಪಿತರು ನನ್ನ ಹೆಂಡತಿ ಸರೋಜಮ್ಮರವರಿಗೆ ಕೆಳಕ್ಕೆ ಕೆಡವಿ ಹಲ್ಲೆ ಮಾಡಿದರು. ಸಾಕ್ಷಿದಾರರಾದ ಹನುಮೇಗೌಡ ಮತ್ತು ಲೊಕೇಶರವರು ಬಂದು ಜಗಳವನ್ನು ಬಿಡಿಸಿ ನನಗೆ ಠಾಣೆಗೆ ಕರೆದುಕೊಂಡು ಹೋದರು. ಆರೋಪಿತರು ನಮಗೆ ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದರು. ನಂತರ ನಾನು ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದೆನು. ದೂರನ್ನು ನಿಪಿ1 ಎದದು ಸಾಕ್ಷಿಯ ಸಹಿಯನ್ನು ನಿಪಿ1 ಎ ಎಂದು ಗುರುತಿಸಲಾಯಿತು.

ನಾನು ದೂರು ನೀಡಿದ ದಿವಸ ಸಂಜೆ 5.00 ಗಂಟೆಗೆ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ನಾನು ಸ್ಥಳವನ್ನು ತೋರಿಸಿದ ಮೇರೆಗೆ ಸಾಕ್ಷಿದಾರರಾದ ರಘು ಮತ್ತು ಬಸಣ್ಣರವರ ಸಮಕ್ಷಮ ಸ್ಥಳ ಪಂಚನಾಮೆಯನ್ನು ಜರುಗಿಸಿದರು. ಪಂಚನಾಮೆಯನ್ನು ಸಂಜೆ 5.30 ರಿಂದ 6.00 ಗಂಟೆವರೆಗೆ ಜರುಗಿಸಲಾಯಿತು. ಪಂಚನಾಮೆಯನ್ನು ನಿಪಿ2 ಎಂದು ಸಾಕ್ಷಿಯ ಸಹಿಯನ್ನು ನಿಪಿ2 ಎ ಎಂದು ಗುರುತಿಸಲಾಯಿತು. ಪಂಚನಾಮೆ ಕಾಲಕ್ಕೆ ಪೊಲೀಸರು ಒಂದು ಮಚ್ಚು, ಒಂದು ದೊಣ್ಣೆ ಒಂದು ಸೀರೆ ಮತ್ತು ಒಂದು ರವಿಕೆಯನ್ನು ವಶಪಡಿಸಿಕೊಂಡರು. ಸದರಿ ವಸ್ತುಗಳನ್ನು ಕ್ರಮವಾಗಿ ಮುದ್ದೆಮಾಲು 1 ರಿಂದ 4 ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಃ- ಆರೋಪಿತರ ಪರ ಶ್ರೀ ಎನ್.ಡಿ ವಕೀಲರಿಂದ**

ನಾನು ಯಾವುದೇ ವಿದ್ಯಾಭ್ಯಾಸವನ್ನು ಮಾಡಿರುವುದಿಲ್ಲ. ಸುಮಾರು 4 ವರ್ಷಗಳ ಹಿಂದೆ ಗಲಾಟೆಯಾಗಿರುತ್ತದೆ. ನನಗೆ ದಿನಾಂಕ ಹೇಳಲು ಆಗುತ್ತದೆ. ಯಾವ ದಿನಾಂಕ ಎಂದು ನಿಖರವಾಗಿ ಈಗ ನನಗೆ ನೆನಪಿಲ್ಲ. ದೂರನ್ನು ನಾನೇ ಗಣಕೀಕೃತ ಮಾಡಿಸಿರುತ್ತೇನೆ. ದೂರನ್ನು ನನ್ನ ವಕೀಲರು ಬರೆದಿರುತ್ತಾರೆ. ದೂರಿನಲ್ಲಿ ಏನು ಬರೆದಿದೆ ಎನ್ನುವ ವಿಚಾರವನ್ನು ನಾನು ತಿಳಿದುಕೊಂಡಿರುತ್ತೇನೆ. ಅಕ್ಕಪಕ್ಕದವರಾದ ಲೋಕೇಶ ಮತ್ತು ಹನುಮೇಗೌಡರು ಜಗಳವನ್ನು ಬಿಡಿಸಿದರು. ಗಲಾಟೆ

ಸುಮಾರು 11.00 ಗಂಟೆಗೆ ಮುಗಿಯಿತು. ಗಲಾಟೆಯಾದಾಗ ಅಕ್ಕಪಕ್ಕದ ಜನರು ಬರುತ್ತಾರೆ ಎಂದರೆ ಯಾರು ಬರಲಿಲ್ಲ ಎಂದು ನುಡಿದಿರುತ್ತಾರೆ. ನನ್ನ ಜಮೀನಿನ ಪಕ್ಕ ಪಿಡಿಜಿ ಕೊಪ್ಪಲಿಗೆ ಹೋಗುವ ಮುಖ್ಯರಸ್ತೆ ಇದೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ಸಾಕಷ್ಟು ಜನರ ಓಡಾಡುತ್ತಾರೆ ಎಂದರೆ ಸರಿ. ಗಲಾಟೆಯಾದ ಸಮಯದಲ್ಲಿ ಸಾಕಷ್ಟು ಜನ ಸೇರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಾನು ಕೆಳಗೆ ಬಿದ್ದಿದ್ದೆನು ಎಂದು ನುಡಿದಿರುತ್ತಾರೆ. ನನಗೂ ಮತ್ತು ಆರೋಪಿತರಿಗೂ ಮೊದಲಿನಿಂದ ದ್ವೇಷ ಇದೆ ಎಂದರೆ ಸರಿ. ಆರೋಪಿತರಾದ ದೇವಮ್ಮ ಮತ್ತು ದೇವೇಗೌಡರವರು ನನ್ನ ವಿರುದ್ಧ ಅಸಲು ದಾವಾ ಸಂಖ್ಯೆ 250/2007 ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಹೂಡಿದ್ದರು ಎಂದರೆ ಸರಿ. ಸದರಿ ದಾವೆ ಅವರ ಪರವಾಗಿ ಡಿಕ್ರಿಯಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಸದರಿ ಡಿಕ್ರಿಯ ವಿರುದ್ಧ ಇದೇ ನ್ಯಾಯಾಲಯದಲ್ಲಿ ನಾನು ಆರ್.ಎ 34/2013 ರಲ್ಲಿ ಮೇಲ್ಮನವಿಯನ್ನು ಸಲ್ಲಿಸಿದ್ದೆನು ಎಂದರೆ ಸರಿ. ಸದರಿ ಮೇಲ್ಮನವಿಯನ್ನು ದಿನಾಂಕ 11.01.2019 ರಂದು ವಜಾ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ವಿರುದ್ಧ ಅಮಾಲ್ಜಾರಿ ಪ್ರಕರಣ ಸಂಖ್ಯೆ 46/2016 ನ್ನು ಆರೋಪಿತರು ಹೂಡಿದ್ದರು ಎಂದರೆ ಸರಿ. ಸದರಿ ಅಮಾಲ್ಜಾರಿ ಪ್ರಕರಣದ ವಿಚಾರಣೆ ನಡೆಯುತ್ತಿದೆ ಎಂದರೆ ಸರಿ. ಸದರಿ ದ್ವೇಷದಿಂದ ನಾನು ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ಹೂಡಿದ್ದೇನೆ ಎಂದರೆ ಸರಿಯಲ್ಲ. ಪುನಃ ನಾನು ಕಿರಿಯ ಶ್ರೇಣಿ ನ್ಯಾಯಾಲಯದಲ್ಲಿ ಅಸಲು ದಾವೆ 195/2019 ಅನ್ನು ಹೂಡಿದ್ದೇನೆ ಎಂದರೆ ಸರಿ. ಸದರಿ ದಾವೆ ಇತ್ಯರ್ಥಕ್ಕೆ ಬಾಕಿ ಇದೆ ಎಂದರೆ ಸರಿ.

ನಾನು ಗಲಾಟೆಯಾದ ದಿವಸವೇ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದೆನು. ನಾನು ಮೊದಲು ಪೊಲೀಸ್ ಠಾಣೆಗೆ ಬಂದು ದೂರನ್ನು ನೀಡಿದ್ದೇನೆ ಎಂದರೆ ಸರಿ. ನಾವು ಯಾವ ಆಟೋದಲ್ಲಿ ಆಸ್ಪತ್ರೆಗೆ ಹೋಗಿದ್ದೆವು ಎಂದು ನನಗೆ ಈಗ ಹೇಳಲು ಆಗುವುದಿಲ್ಲ. ಸದರಿ ಆಟೋ ಚಾಲಕನ ಹೆಸರೂ ಕೂಡ ನನಗೆ ಗೊತ್ತಿಲ್ಲ. ಗಲಾಟೆಯಾದ ದಿವಸವೇ ಬೆಳಗ್ಗೆ 10.00 ರಿಂದ 11.00 ಗಂಟೆ ಸಮಯದಲ್ಲಿ ನಾನು ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ಪಡೆದುಕೊಂಡಿದ್ದೆನು. ಆಸ್ಪತ್ರೆಯಲ್ಲಿ ನಾನು ಗಲಾಟೆಯಾದ ಬೆಳಗ್ಗೆ 11.00 ಗಂಟೆಯಿಂದ ಮರುದಿವಸ 11.00 ಗಂಟೆವರೆಗೆ ದಾಖಲಾಗಿದ್ದೆನು. ಯಾವ ವೈದ್ಯರು ನನಗೆ ಚಿಕಿತ್ಸೆಯನ್ನು ನೀಡಿದರು ಎಂದು ನನಗೆ ಹೇಳಲು ಆಗುವುದಿಲ್ಲ.

ಅದೇ ದಿವಸ ಸಂಜೆ ಪೊಲೀಸರು ಪಂಚನಾಮೆಗೆ ಸ್ಥಳಕ್ಕೆ ಬಂದಿದ್ದರು. ಪಂಚನಾಮೆಯನ್ನು ಸಂಜೆ 5.00 ಗಂಟೆಗೆ ಜರುಗಿಸಿದರು. ಯಾವ ಪೊಲೀಸರು ಸ್ಥಳಕ್ಕೆ ಬಂದಿದ್ದರು ಎಂದು ನನಗೆ ಹೆಸರು ಗೊತ್ತಿಲ್ಲ. ಪಂಚನಾಮೆಗೆ ಒಬ್ಬರೇ ಪೋಲೀಸರು ಬಂದಿದ್ದರು. ಪಂಚನಾಮೆ ಕಾಲಕ್ಕೆ ಪೊಲೀಸರಿಗೆ ಸ್ಥಳವನ್ನು ನಾನೇ ತೋರಿಸಿದೆನು. ಪಂಚನಾಮೆ ಕಾಲಕ್ಕೆ ರಘು ಮತ್ತು ಪ್ರಸನ್ನಗೌಡರವರು ಸ್ಥಳದಲ್ಲಿ ಇದ್ದರು. ಅವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಸದರಿ ಪಂಚರು ತಾವಾಗಿಯೇ ಸ್ಥಳಕ್ಕೆ ಬಂದಿದ್ದರು. ಸಾಕ್ಷಿ ಮುಂದುವರಿದು ಅವರನ್ನು ಪೊಲೀಸರು ಕರೆಸಿದ್ದರು ಎಂದು ನುಡಿದಿರುತ್ತಾರೆ. ಪೊಲೀಸರು ಸ್ಥಳದಲ್ಲಿ ಯಾವುದೇ ವಸ್ತುಗಳನ್ನು ವಶಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ವಸ್ತುಗಳನ್ನು ನಾನೇ ಪೊಲೀಸರಿಗೆ ತೋರಿಸಿದ್ದೆನು. ನ್ಯಾಯಾಲಯದ ಮುಂದೆ ಇರುವ ಮುದ್ದೆಮಾಲು 3 ಸೀರೆ ಬಣ್ಣಬಣ್ಣದ ಸೀರೆಯಾಗಿದೆ ಎಂದರೆ ಸರಿ. ಆರೋಪಿತರ ಮೇಲೆ ದ್ವೇಷ ಸಾಧಿಸಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದಿರೆ ಸರಿಯಲ್ಲ. ಪೋಲೀಸರೊಂದಿಗೆ ಷರೀಕಾಗಿ ಪಂಚನಾಮೆಯನ್ನು ಠಾಣೆಯಲ್ಲಿ ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ಸುಳ್ಳು ಗಾಯದ ಪ್ರಮಾಣಪತ್ರವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಸಿವಿಲ್ ವ್ಯಾಜ್ಯದ ದ್ವೇಷದಿಂದ ಈ ಪ್ರಕರಣವನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ಮುದ್ದೆಮಾಲುಗಳನ್ನು ಪ್ರಕರಣಕ್ಕೋಸ್ಕರ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ಶಮೀರ್.ಪಿ.ನಂದ್ಯಾಲ್)

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.